ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2350

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಪರಿಸರ ಹಾಗೂ ಜೀವಿಶಾಸ್ತ್ರ, ಸಚಿವರು

ಉತ್ತರಿಸುವ ದಿನಾಂಕ : 29-03-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ಅತ್ಯುತ್ತಮ 10 ಪ್ರವಾಸೋದ್ಯಮ ಕೇಂದ್ರಗಳು ಯಾವುವು; 1 ರಿಂದ 10ರ ಕ್ರಮಾಂಕ (top ten) ದಲ್ಲಿ ನೀಡುವುದು; ಪ್ರತಿ ಜಿಲ್ಲೆಯ ಅತ್ಯುತ್ತಮ 10 ಪ್ರವಾಸೋದ್ಯಮ ಕೇಂದ್ರಗಳು ಯಾವುವು; (ಜಿಲ್ಲಾವಾರು 1 ರಿಂದ 10ರ ಕ್ರಮಾಂಕ (top ten)ದಲ್ಲಿ ನೀಡುವುದು)	ರಾಜ್ಯದಲ್ಲಿರುವ ಪ್ರವಾಸಿ ಕೇಂದ್ರಗಳನ್ನು ಶ್ರೇಣಿಕರಣಗೊಳಿಸಿರುವುದಿಲ್ಲ.
ಆ)	ಅವುಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; ವೆಚ್ಚವೆಷ್ಟು;	ಉದ್ಭವಿಸುವುದಿಲ್ಲ.
ಇ)	ನೂತನವಾಗಿ ಆಯ್ಕೆಯಾಗಿರುವ ಪ್ರವಾಸೋದ್ಯಮ ಸಚಿವರು ಎಷ್ಟು ಪ್ರವಾಸೋದ್ಯಮ ಕೇಂದ್ರಗಳಿಗೆ ಭೇಟಿ ನೀಡಿದ್ದಾರೆ;	ನೂತನವಾಗಿ ಆಯ್ಕೆಯಾಗಿರುವ ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು ಈಗಾಗಲೇ 18 ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡಿರುತ್ತಾರೆ.
ಈ)	ಕೇರಳ, ಗೋವಾ ರಾಜ್ಯಗಳ ರೀತಿಯಲ್ಲಿ ಪ್ರವಾಸೋದ್ಯಮ ಕ್ಷೇತ್ರ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಯಾವ ರೀತಿಯ ಚಿಂತನೆ ಹೊಂದಿದ್ದಾರೆ? (ಕೇಂದ್ರವಾರು ದಿನಾಂಕದೊಂದಿಗೆ ಮಾಹಿತಿ ನೀಡುವುದು)	ಕರಾವಳಿ ನಿಯಂತ್ರಣ ವಲಯ (CRZ)ದ ನಿರ್ಬಂಧನೆಗಳ ಜಾರಿಗೆ ಬರುವ ಮುನ್ನವೇ ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ ಅಂದರೆ, 1980ರ ದಶಕದಿಂದಲೇ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯಗಳು ಆರಂಭಗೊಂಡಿರುತ್ತವೆ. 2011ರಲ್ಲಿ ಕೆಲವು ಕರಾವಳಿ ಪ್ರದೇಶಗಳನ್ನು ಪರಿಸರ (ರಕ್ಷಣೆ) ಕಾಯ್ದೆ-1986ರಡಿ ಕರಾವಳಿ ನಿಯಂತ್ರಣ ವಲಯ (CRZ)ದ ವ್ಯಾಪ್ತಿಗೆ ತರಲಾಗಿರುತ್ತದೆ. ಆದ್ದರಿಂದ, ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಕರಾವಳಿ ನಿಯಂತ್ರಣ ವಲಯ (CRZ)ದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ. ಕರಾವಳಿ ನಿಯಂತ್ರಣ ವಲಯ (CRZ)ದ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರದಿಂದ ದಿನಾಂಕ: 18.01.2019ರಂದು ಹೊರಡಿಸಲಾಗಿರುತ್ತದೆ. ಅಂತಿಮ ಅಧಿಸೂಚನೆಯನ್ನು ಸಕ್ಷಮ ಪ್ರಾಧಿಕಾರವು ಹೊರಡಿಸಿದ ನಂತರ, ನಿಯಮಾನುಸಾರ ಅನುಮತಿ ಪಡೆದು ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು. ಈಗಾಗಲೇ ಕರ್ನಾಟಕದ ಎರಡು ಕಡಲ ತೀರಗಳಾದ ಕಾಸರಕೋಡ್ ಮತ್ತು ಪಡುಬಿದ್ರಿ ಬೀಚ್‌ಗಳಿಗೆ "ಫೌಂಡೇಷನ್ ಫಾರ್ ಎನ್ವಿರಾನ್ಮೆಂಟ್ ಎಜುಕೇಷನ್ ಡೆನ್ಮಾರ್ಕ್" ಸಂಸ್ಥೆಯು ಅಂತರರಾಷ್ಟ್ರೀಯ "ಬ್ಲ್ಯೂಫ್ಲ್ಯಾಗ್" ಮಾನ್ಯತೆ ನೀಡಿದೆ.

..2

ರಾಜ್ಯದ ಕರಾವಳಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು "ಕೋಸ್ಟಲ್ ಮಾಸ್ಟರ್ ಪ್ಲ್ಯಾನ್" ಅನ್ನು, ಸಮಾಲೋಚಕರಿಂದ ತಯಾರಿಸಿಕೊಳ್ಳಲಾಗಿದ್ದು, ಕರಾವಳಿ ನಿಯಂತ್ರಣ ವಲಯ (CRZ)ದ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ, ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸಲಾಗುವುದು.

ಮುಂದುವರೆದು, 2021-22ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಉಡುಪಿ ಜಿಲ್ಲೆಯ ತ್ರಾಸಿ, ಮರವಂತೆ, ಒತ್ತಿನಾಣೆ ಹಾಗೂ ಇತರೆ ಕಡಲ ತೀರಗಳನ್ನು ರೂ.10.00 ಕೋಟಿಗಳ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದೆಂದು ಹಾಗೂ ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಸೋಮೇಶ್ವರ ಕಡಲ ತೀರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ರೂ.10.00 ಕೋಟಿಗಳನ್ನು ಒದಗಿಸಲಾಗುವುದೆಂದು ಘೋಷಿಸಲಾಗಿರುತ್ತದೆ.

ಇದಲ್ಲದೇ, ರಾಜ್ಯದ ಕರಾವಳಿ ತೀರಗಳ ಅಭಿವೃದ್ಧಿಗಾಗಿ ಇಲಾಖೆಯಿಂದ ಮಂಜೂರಾಗಿರುವ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ

(ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಈವರೆಗೂ ಬಿಡುಗಡೆ ಮಾಡಿರುವ ಮೊತ್ತ
1	ಬ್ಲ್ಯೂ ಫ್ಲ್ಯಾಗ್ ಸರ್ಟಿಫಿಕೇಷನ್ ಯೋಜನೆ ಸಂಬಂಧ ಉಡುಪಿ ಜಿಲ್ಲೆಯ ಪಡುಬಿದ್ರಿ ಬೀಚ್‌ನ ಎಂಡ್ ಪಾಯಿಂಟ್‌ನ ವ್ಯಾಪ್ತಿಯಲ್ಲಿ ಆಯ್ಕೆ ಮಾಡಿರುವ ಜಾಗದಲ್ಲಿ ನೆಲಸಮತಟ್ಟುಗೊಳಿಸುವುದು, ಆರ್.ಸಿ.ಸಿ. ತಡೆಗೋಡೆ, ವಾಹನ ನಿಲುಗಡೆ, ಸೋಲಾರ್ ಪ್ಯಾನೆಲ್ ಅಳವಡಿಸಲು ಶೆಡ್ ನಿರ್ಮಾಣ, ಕಾಮಿನಿ ನದಿಗೆ ತಡೆಗೋಡೆ ನಿರ್ಮಾಣ, ಫ್ಲೋಟಿಂಗ್ ಜಟ್ಟಿ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಕಾಮಗಾರಿಗಳ ಅಭಿವೃದ್ಧಿ (ಬಂಡವಾಳ ವೆಚ್ಚಗಳು -2018-19)	268.50	268.50
2	ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು ಕಡಲ ತೀರದಲ್ಲಿ ಸರ್ಫಿಂಗ್ ಸ್ಕೂಲ್, ಶೌಚಾಲಯ, ಪಾರ್ಕಿಂಗ್, ಸ್ವಾಗತ ಕಮಾನು, ಪರಗೋಲಾದೊಂದಿಗೆ ವಾಕಿಂಗ್ ಟ್ರ್ಯಾಕ್, ಕಿಯಾಸ್ಕ್‌ಗಳು, ರಸ್ತೆ, ಚರಂಡಿ ಮತ್ತು ಕಾಲುಪಥ ಅಭಿವೃದ್ಧಿ ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು (ಕೆ.ಟಿ.ವಿ.ಜಿ-2019-20)	1000.00	500.00
3	ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲತೀರದಲ್ಲಿ ಪ್ರವಾಸಿ ಮಂದಿರ ನವೀಕರಣ, ಸ್ವಾಗತ ಪೋರ್ಚ್, ಲ್ಯಾಂಡ್ ಸ್ಕೇಪಿಂಗ್, ಇಂಟರ್‌ಲಾಕ್ ಪೇವರ್ಸ್, 2 -ಲೈಫ್ ಗಾರ್ಡ್ ವಾಚ್ ಟವರ್, ಹಳೆಯ ಮತ್ತು ನೂತನ ಶೌಚಾಲಯಗಳ ನವೀಕರಣ, ಫುಡ್ ಕಿಯಾಸ್ಕ್, ಓಪನ್ ಏರ್ ಥಿಯೇಟರ್, ವಾಚ್ ಟವರ್ ಒಳಗೊಂಡ ಸ್ವಾಗತದ್ವಾರ, ಸಿ.ಸಿ. ಟಿವಿ ಫೆಸಿಲಿಟಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದು (ಕೆ.ಟಿ.ವಿ.ಜಿ-2019-20).	500.00	0.00

ಸಂಖ್ಯೆ: ಟಿಓಆರ್ 115 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ,
ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.